


ಕಥೆಯೂ ಹೌದೆನ್ನಿಸುತ್ತದೆ. ನೂರು ವರ್ಷಗಳ ಹಿಂದೆ ಲಕ್ಷ ಲಕ್ಷ ಸಂಖ್ಯೆಯಲ್ಲಿದ್ದ ಹುಲಿಗಳೀಗ ಸಾವಿರದ ಎಣಿಕೆಗೆ ಬಂದು ತಲುಪಿರುವ ವರ್ತಮಾನದ ಹಿನ್ನೆಲೆಯಲ್ಲಿ ಅವನಿಯ ದುರಂತವನ್ನು ಗ್ರಹಿಸಬೇಕಾಗಿದೆ.

### ಹಬ್ಬಿದಾ ಮಲೆ ಮಧ್ಯದೊಳಗೆ...

ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದ ಯಾವತ್ಮಾಲ್ ಜಿಲ್ಲೆಯ ಹೊರವಲಯದಲ್ಲಿ ಕಾಡೊಂದಿದೆ. ಆ ದಟ್ಟ ಅರಣ್ಯದ ಸುತ್ತಮುತ್ತ ಹಲವು ಹಳ್ಳಿಗಳು. ಆ ಹಳ್ಳಿಗರಿಗೆ ಅಲ್ಲಿನ ಕಾಡು ಪ್ರಾಣಿಗಳಾಗಲಿ, ಪಕ್ಷಿಗಳಾಗಲಿ ತೊಂದರೆ ಕೊಟ್ಟ ಬಗ್ಗೆ ವರದಿಗಳಿಲ್ಲ. ಮನುಷ್ಯ ಹಾಗೂ ಪ್ರಕೃತಿಯ ಸಹಪಯಣದ ಅಪೂರ್ವ ಉದಾಹರಣೆ ಅಲ್ಲಿ ಅನಾವರಣಗೊಂಡಂತಿತ್ತು. ಆ ಕಾಡು ಅತ್ತ ಆಂಧ್ರದ ಕೆಲ ಭೂಭಾಗಕ್ಕೂ ಚಾಚಿಕೊಂಡಿತ್ತು. ಇದೀಗ ಆ ಭಾಗ ತೆಲಂಗಾಣದ ನಕ್ಷೆಯಲ್ಲಿದೆ. ತೆಲಂಗಾಣ ರಾಜ್ಯದ ಗಡಿಯಲ್ಲಿ ಆದಿಲಾಬಾದ್ ಎಂಬ ಊರೊಂದಿದೆ. ಕೆಲವು ವರ್ಷಗಳ ಹಿಂದೆ ಆದಿಲಾಬಾದ್‌ನಲ್ಲಿ ಸಿಮೆಂಟ್ ಫ್ಯಾಕ್ಟರಿಯೊಂದು ತಲೆ ಎತ್ತಿತು. ಆಗ ಅಲ್ಲಿನ ಜನ ತಮಗರಿವಿಲ್ಲದೆಯೋ ಅಥವಾ ಅನಿವಾರ್ಯವಾಗಿಯೋ ತಮ್ಮ ತಮ್ಮ ಜಾಗಗಳನ್ನು ಆ ಕಂಪನಿಗೆ ಮಾರಾಟ ಮಾಡಿದರು. ಒಂದಿಷ್ಟು ಅರಣ್ಯ ಭೂಮಿಯೂ ಸಿಮೆಂಟ್ ಕಾರ್ಖಾನೆಯ ಪಾಲಾಯಿತು.

ಯಾವತ್ಮಾಲ್ ಜಿಲ್ಲೆಯ ಮುಕುತ್ಬನ್ ಎಂಬ ಗ್ರಾಮದ ಆಸುಪಾಸಿನ ಪರಿಸರ, ಸುಣ್ಣದ ಕಲ್ಲು ಹಾಗೂ ಡೊಲಾಮೈಟ್‌ನಿಂದ (ಸ್ಟೀಲ್, ಗ್ಲಾಸ್, ಸೆರಾಮಿಕ್, ಟೈಲ್ಸ್ ತಯಾರಿಕೆಗೆ ಮೂಲವಸ್ತುವಿನಿಂದ) ಸಂಪದ್ಭರಿತವಾದ ಭೂಭಾಗ. ಅಲ್ಲಿ, ಒಂದಿಷ್ಟು ಗಣಿಗಾರಿಕೆ ನಡೆಸಿಬಿಟ್ಟರೆ, ಸಿಮೆಂಟ್ ಕಾರ್ಖಾನೆಯೊಂದಕ್ಕೆ ಬೇಕಾದ ಕಚ್ಚಾ ವಸ್ತುಗಳು ಸುಲಭವಾಗಿ ದಕ್ಕಿಬಿಡುತ್ತವೆ ಎನ್ನುವುದು ಲೆಕ್ಕಾಚಾರ. ಸಹಜವಾಗಿಯೇ ಆ ಭಾಗದ ಮೇಲೆ ಮತ್ತೆ ಸಿಮೆಂಟ್ ಕಾರ್ಖಾನೆಯ ಸಂಸ್ಥೆಯ ಕಣ್ಣು ಬಿತ್ತು. ಆ ಭಾಗದ 467 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಸಿಮೆಂಟ್ ಫ್ಯಾಕ್ಟರಿಯೊಂದನ್ನು ನಿರ್ಮಿಸುವ ಯೋಜನೆ ರೂಪುಗೊಂಡಿತು. ಯೋಜನೆಗೆ ಸರ್ಕಾರದ ಸಮ್ಮತಿಯೂ ದೊರೆಯಿತು.


ಅವನಿ: ಮರೆಯಬಾರದ ನೆನಪು